ಬಾರಿಗೆ ಇಂಥ ಸ್ವರೂಪ ನೋಡಿ ಅವರೆಲ್ಲ ಗಾಬರಿಗೊಂಡರು.

'ನೋಡಮ್ಮ ಸುಜಾತಾ, ನನ್ನನ್ನು ನಿನ್ನ ಅಪ್ಪನೆಂದೋ, ಅಣ್ಣನೆಂದೋ ಏನಾದರೂ ಅಂದುಕೋ. ಏನಾಗಿದೆ ನಿನಗೆ? ಬೆಳಗ್ಗೆ ಸರಿಯಾಗಿಯೇ ಇದ್ದೆಯಲ್ಲ. ಆ ಮೇಲೆ ನಿನ್ನ ಅಣ್ಣಂದಿರ ಫೋನ್ ಏನಾದರೂ ಬಂದಿತ್ತೆ? ನಿನಗೆ ಏನು ಸಹಾಯ ಬೇಕಿದ್ದರೂ ಕೇಳು. ನಾವೆಲ್ಲ ಇದ್ದೇವಲ್ಲ' ಎಂದು ಕಳಕಳಿಯಿಂದ ಶ್ರೀನಿವಾಸರಾಯರು ಕೇಳಿದಾಗ ಸುಜಾತಾ ಸ್ವಲ್ಪ ನಾಚಿ ತನ್ನನ್ನು ತಾನು ಸುಧಾರಿಸಿಕೊಳ್ಳುತ್ತ ಸರಿಯಾಗಿ ಎದ್ದು ಕುಳಿತಳು.

'ಏನಿಲ್ಲ ಅಣ್ಣ, ಬೆಳಿಗ್ಗಿನಿಂದ ತಲೆ ನೋವು, ಅಪ್ಪ ಅಮ್ಮನ ನೆನಪು ಕಾಡಿತು' ಎಂದು ಸುಳ್ಳನ್ನು ಪೇರಿಸಿದಳು.

'ಅಷ್ಟೇ ತಾನೇ? ನೀನು ಜೀವಿಸಿರುವಷ್ಟು ಕಾಲವೂ ಅವರೂ ಇರಬೇಕೆಂದರೆ ಅದು ಹೇಗೆ ಸಾಧ್ಯ? ಅಡಿಗೆಯವ ಏನೇನೋ ಅಂದ. ನಮಗೂ ಗಾಬರಿಯಾಯ್ತು. ಈಗ ಏಳು, ನನ್ನ ಜತೆ ಒಂದು ರೌಂಡ್ ಬಾ, ಎಲ್ಲ ಸರಿ ಹೋಗುತ್ತದೆ.'

'ಬೇಡ. ಇವತ್ತೊಂದು ದಿನ ಹೀಗೆ ಬಿದ್ದಿರುತ್ತೇನೆ. ನಾಳೆ ತನ್ನಷ್ಟಕ್ಕೇ ಎಲ್ಲ ಸರಿ ಹೋಗುತ್ತದೆ' ಎಂದಳು ಸುಜಾತಾ. ಎಲ್ಲರೂ ಹೊರಟು ಹೋದರೂ ಶ್ರೀನಿವಾಸರಾಯರು ಹಾಗೂ ಅವರ ಪತ್ನಿ ಅದೂ ಇದೂ ಮಾತನಾಡುತ್ತ ಇನ್ನೂ ಸ್ವಲ್ಪ ಹೊತ್ತು ಅವಳ ಜತೆ ಕಳೆದು ಆ ಮೇಲೆಯೇ ಹೊರಟು ಹೋದರು. ಅವರು ಹೋದ ಸ್ವಲ್ಪ ಹೊತ್ತಿನಲ್ಲಿಯೇ ಆಳು ಬಂದು ರಾತ್ರಿಯ ಊಟ ಇಟ್ಟು ಹೋದ.

ಇವರೆಲ್ಲ ಯಾರೋ ಏನೋ. ಯಾವ ಜನ್ಮದ ಋಣ ಇದು? ಅವರು ಇವಳನ್ನು ನೆಚ್ಚಿಕೊಂಡಂತೆಯೇ ಸುಜಾತಾಳೂ ಅವರ ನೋವು ನಲಿವುಗಳಿಗೆ ಸ್ಪಂದಿಸುತ್ತಿದ್ದಳು. ಜೀವನ ಒಂದು ಸಣ್ಣ ಭರವಸೆಯ ಎಳೆಯನ್ನು ಹಿಡಿದುಕೊಂಡು ಮುಂದೆ ಹೋಗಲು ಪ್ರಯತ್ನಿಸುತ್ತಲೇ ಇರುತ್ತದೆ.

ತಪ್ಪು ಮಾಡಿದವ ಶಶಿಕಾಂತ. ತನ್ನ ಮುಂದೆ ಸಣ್ಣ ಕೋರಿಕೆ ಇಟ್ಟು ತನ್ನ ಜೀವನದ ಗತಿಯನ್ನೇ ಬದಲಾಯಿಸಿದ. ತನ್ನನ್ನು ಕಾಣದ ನರಕಕ್ಕೆ ತಳ್ಳಿದ ಸ್ವಾರ್ಥಿ ಅವನು. ಇದನ್ನು ತಿಳಿದೂ ಈಗ ರೋಧಿಸುವ ತನಗೆ ಹುಚ್ಚೇ ಸರಿ. ಬೆಳಿಗ್ಗೆ ಅವನನ್ನು ಕಂಡ ತಕ್ಷಣ ತಾನೇಕೆ ಹೀಗೆ ಬೆದರಬೇಕು? ಈ ಬೇಡದ ಭಾವನೆಗಳನ್ನು ಮೆಟ್ಟಿ ತಾನು ಮೇಲೆ ಏಳಬೇಕು. ಯೋಚನೆಯಿಂದ ಬಳಲಿದ ಕಣ್ಣು, ಮನಸ್ಸುಗಳು ಅವಳನ್ನು ನಿದ್ರೆಗೆ ತಳ್ಳಿದವು.

ಮರುದಿನ ಬೆಳಿಗ್ಗೆ ಎದ್ದ ಮೇಲೆ ಆಕೆ ಮೊದಲಿನಂತಾದಳು. ಅದೇ ಚಟುವಟಿಕೆಗಳು. ಶ್ರೀನಿವಾಸ ರಾಯರ ಜತೆ ರೌಂಡಿಗೆ ಹೋಗಿ ಬಂದಳು. ಅವರ ಪತ್ನಿಯ ಜತೆ ಚಹ ಹೀರಿದಳು. ಎದುರು ಕಾಣ ಸಿಕ್ಕವರನ್ನು 'ಹೆಲೋ' ಎಂದು ಕೈ ಬೀಸಿದಳು. ತಾನು ನಟಿಸುತ್ತಿಲ್ಲವಷ್ಟೇ ಎಂದು ತನ್ನನ್ನೇ ಕೇಳಿ ಕೊಂಡಳು.

ಶಶಿಕಾಂತನ ಭೇಟಿ ಕೆಲವೊಮ್ಮೆ ಆಗುತ್ತಿದ್ದರೂ ಬೇಕೆಂದೇ ಅವನ ದೃಷ್ಟಿ ತಪ್ಪಿಸಿ ಮುಂದೆ ನಡೆಯುವಳು ಸುಜಾತಾ. ತನ್ನ ಕಾಟೇಜಿನಲ್ಲಿ ದಿನದ ಸ್ವಲ್ಪವೇ ಭಾಗ ಕಳೆದು ಉಳಿದೆಲ್ಲ ವೇಳೆ ಶ್ರೀನಿವಾಸರಾಯರ ಜತೆಯಲ್ಲೇ ಇರುತ್ತಿದ್ದಳು. ಅವರಿಗೂ ಅವಳ ಸಾಂಗತ್ಯ ತುಂಬಾ ಇಷ್ಟವಾಗುತ್ತಿತ್ತು.

'ನಿನಗೊಬ್ಬಳಿಗೇ ಕಾಟೇಜ್ ವಾಸ ಯಾತಕ್ಕೆ? ನಮ್ಮ ಬಳಿಯೇ ಬಂದು ಇರಬಾರದೇಕೆ?' ಎಂದು ಅವರು ಅಂತಃಕರಣ ಪೂರ್ವಕವಾಗಿ ನುಡಿದರೆ ಅವಳೂ ನಗುತ್ತ ಛೇಡಿಸುವಳು.